 ISSN : 2583-2948

# ನ ಭೂತೋ ನ ಭವಿಷ್ಯತಿ

**ರಾಘವೇಂದ್ರ ರಾಜು ಕೆ. ಎಂ**
ಪ್ರಯೋಗಾಲಯ ಬೋಧಕರು,
ಅಲಯನ್ಸ್ ವಿಶ್ವವಿದ್ಯಾಲಯ

ರಾತ್ರಿ 10:30, ಗಡಿಯಾರದ ಮುಳ್ಳುಗಳು ವೇಗ ಹೆಚ್ಚಿಸಿದಂತೆ ಬೇಗ ಬೇಗನೆ ಮುಂದಕ್ಕೆ ಓಡುತ್ತಿವೆಯೇನೋ ಎನ್ನಿಸಿತು. ಅದಕ್ಕೆ ಸರಿಸಮನಾಗಿ ನನ್ನ ಹೃದಯ ಬಡಿತವು ತಾನೇನು ಕಡಿಮೆ ಇಲ್ಲ ಎನ್ನುವ ಮಟ್ಟಿಗೆ ಜೋರಾಗಿ ಬಡಿದುಕೊಳ್ಳುತ್ತಲಿದೆ. ಇವೆರಡೂ ಶಬ್ದಗಳು ಗಂಟೆ-ಜಾಗಟೆಯಂತೆ ನನ್ನ ಕಿವಿಗೆ ಅಪ್ಪಳಿಸುತ್ತ ಕರ್ಣ ಮರ್ಧನ ಮಾಡುತ್ತಿವೆ.

ನಾಳೆ ಬೆಳಿಗ್ಗೆ 10:30ಕ್ಕೆ ಸರಿಯಾಗಿ ಕೇಸ್ ವಿಚಾರಣೆ ಪ್ರಾರಂಭವಾಗುತ್ತದೆ. ಅಂದರೆ ಈಗಿನ ಸಮಯಕ್ಕೆ ಹೋಲಿಸಿದರೆ ಇನ್ನು 12 ಗಂಟೆಗಳು ಮಾತ್ರ. ಅಲ್ಲಿ ನಾನು ಈ ಕೇಸ್ ವಾದಿಸಲೇಬೇಕಿತ್ತು.

ಸ್ವತಃ ಲಾಯರ್ ಆಗಿ ಮತ್ತೊಬ್ಬ ಲಾಯರ್ ಅನ್ನು ಈ ಕೇಸಿನ ಮಧ್ಯೆ ವಿಚಾರಣೆಗೆ ತಂದರೆ ಅವರು ನ್ಯಾಯಯುತವಾಗಿ ಈ ಕೇಸ್ ಗೆಲ್ಲಿಸಿಕೊಡುತ್ತರೋ ಇಲ್ಲವೋ ಎಂಬ ಅನುಮಾನಕ್ಕಿಂತ ಆಗಿರುವ ಅನ್ಯಾಯಕ್ಕೆ, ನೊಂದ ಆ ಜೀವಕ್ಕೆ ನ್ಯಾಯ ಕೊಡಿಸಲೇಬೇಕಿದೆ.

ಈ ಕೇಸ್ ಫೈಲ್ ಆದ ದಿನದಿಂದಲೇ ಅಮ್ಮ ನನ್ನ ಜೊತೆ ಮಾತನಾಡುವುದನ್ನು ಬಿಟ್ಟಿದ್ದಾಳೆ. ಕಾರಣವೇನೆಂದರೆ, ನಾನು ಆರೋಪಿ ಎಂದು ದೂಷಿಸಿ ತಪ್ಪು ಹೊರಿಸಿ ಕಾನೂನಿನ ಚೌಕಟ್ಟಿನಲ್ಲಿ ಸಮಾಜದ ಜನರೆಲ್ಲರ ಮುಂದೆ ಕೈಕಟ್ಟಿ ನಿಲ್ಲುವಂತೆ ಮಾಡಿರುವುದು ಬೇರೆ ಯಾರನ್ನೋ ಅಲ್ಲ, ನನ್ನ ತಂದೆಯನ್ನೆ.

ಮದುವೆಯಾದ ದಿನದಿಂದ ಅಮ್ಮ ಅಪ್ಪನನ್ನು ಎಷ್ಟು ಬಿಟ್ಟಿರಲಾರಳೋ ಅಷ್ಟೇ ಸಮವಾಗಿ ತುಳಸೀಕಟ್ಟೆಯನ್ನೂ ಸಹ ಬಿಟ್ಟಿರಲಿಲ್ಲ.

"ಮುತ್ತೈದೆ ಸಾವು ಬರಲಿ, ಸಾಯುವವರೆಗೂ ಗಂಡನ ಜೊತೆಯಲ್ಲೆ ಇರುವಂತಾಗಲಿ" ಎಂದು.

ಗಂಡನೇ ದೇವರೆಂದು ನಂಬಿದ್ದಳು. ದೇವರಲ್ಲಿ ಗಂಡನ ಯೋಗಕ್ಷೇಮ ಬೇಡುತ್ತಾ, ಸದಾ ಅವರ ಒಳಿತಿಗಾಗಿ ಅವರು ಕೈಗೊಂಡ ಕಾರ್ಯ ತಪ್ಪದೇ ನೆರವೇರಲಿ ಎಂದು ದಿನವೂ ಪೂಜೆ ವ್ರತ ನೇಮಾದಿಗಳನ್ನು ಮಾಡುತ್ತಲೇ ಬಂದಿದ್ದಳು.

ಅವಳಿಗೆ ತಿಳಿಯದೇ ಅವಳ ಪೂಜಾಫಲ ಸಿದ್ದಿಗೊಂಡ ಕಾರಣ ಅಪ್ಪನ ಎಲ್ಲಾ ಕೆಲಸದಲ್ಲೂ ಜಯ-ವಿಜಯಗಳೇ. ಅದೂ ಎಷ್ಟರ ಮಟ್ಟಿಗೆ ಎಂದರೆ ಅಪ್ಪನ ಕೆಡುಕು ನಿರ್ಧಾರಗಳಲ್ಲೂ, ತಪ್ಪಿನ ಹಾದಿಯಲ್ಲೂ ಜಯ ಸಾಧಿಸುತ್ತ ಬಂದರು.

ಈ ಸಾಧನೆ ಊರನ್ನೆಲ್ಲ ಸುಡುತ್ತ ಬರುವಾಗ ಊರಿನ ಮಧ್ಯೆಯೇ ಇರುವ ನಮ್ಮ ಮನೆಯೇನೂ ಹೊರತಲ್ಲ ಎನ್ನುವ ಹಾಗೆ ನಮ್ಮ ಮನೆಯನ್ನೂ ಸುಟ್ಟಿತು. ಅರ್ಥಾತ್ ನನ್ನ ಬಾಳು ಸುಟ್ಟು ಬೂದಿಯಾಯಿತು.

'ಜೆನ್ನಿ' ನನ್ನ ಮುದ್ದಿನ ಹೆಂಡತಿ. ಅವಳ ಹೆಸರು ತುಟಿಯಲ್ಲಿ ಬಂದೊಡನೆ ಬಿರಿಯುತಿದ್ದ ತುಟಿಗಳು ಈಗ ಬಿಗಿಯಾಗಿ ಮಾತು ಮೌನವಾಗಿ ಗಂಟಲು ಉಬ್ಬಿಬಂದು ಹುಚ್ಚನಂತಾಗಿ ಹೋಗಿದ್ದೇನೆ.

“ನೀನಿಲ್ಲದ ಬದುಕು ಶೂನ್ಯ” ಎಂದು ಬಾರಿ ಬಾರಿ ಹೇಳುತ್ತಿದ್ದಾಗಲೂ ಸುಮ್ಮನೆ ಕೇಳುತ್ತಾ "ಯು ಸಿಲ್ಲಿ" ಎಂದು ನಕ್ಕು ಸುಮ್ಮನಾಗುತ್ತಿದ್ದಳು.

ಹುಟ್ಟಿ ಬೆಳದದ್ದು ಕ್ರಿಶ್ಚಿಯನ್ ಮನೆತನದಲ್ಲಿಯಾದರು, ಮುಗ್ಧತೆ ತುಂಬಿದ ಹುಡುಗಿ. ಉಡುಗೆ-ತೊಡುಗೆಗಳಲ್ಲಿ ಸಾಮಾನ್ಯವಾಗಿ ಪಾಶ್ಚಿಮಾತ್ಯ ಪದ್ಧತಿಯನ್ನೇ ತುಂಬಿದ್ದರೂ ಸಹ ಅವಳಲ್ಲಿ ಅಂದ ತೋರ್ಪಡಿಕೆಯ ಯಾವ ಅವ್ಯಯವು ಇರಲಿಲ್ಲ. ಅವಳ ಸುತ್ತಮುತ್ತಲಿನ ಸಮಾಜದ ರೀತಿ ನೀತಿಗೆ ತಕ್ಕಂತೆ ತನ್ನನ್ನು ತಾನು ಉಡುಗೆಯಲ್ಲಿ ಎಲ್ಲರಂತೆ ಕಾಣುತಿದ್ದಳೇ ಹೊರತು, ಮನಸಿನಲ್ಲಿ ಬಿರಿದ ಮಲ್ಲಿಗೆಯ ಘಮ ಹೊಂದಿದ್ದಳು.

ನನ್ನ ಆವಳ ಭೇಟಿಯಾದದ್ದು ಕೋರ್ಟ್ ಆವರಣದಲ್ಲಿ. ಅವಳ ಸ್ನೇಹಿತೆ 'ಲೂಯಿ' ಕಾರ್ ಡ್ರೈವ್ ಮಾಡುತ್ತಾ ತಿಳಿಯದೇ ವೇಗ ಹೆಚ್ಚಿಸಿ ಮುಂದೆ ಬರುತ್ತಿದ್ದ ಸ್ಕೂಟರ್ ಸವಾರನಿಗೆ ಡಿಕ್ಕಿ ಹೊಡೆದಿದ್ದಳು. ಹೆಚ್ಚೇನು ಅಪಾಯಕಾರಿ ಅಲ್ಲದಿದ್ದರೂ ಸ್ಕೂಟರ್ ಡ್ಯಾಮೇಜ್ ಗಾಗಿ ಅದರ ಓನರ್ ಕೇಸ್ ಹಾಕಿದಾಗ ಕೋರ್ಟ್ ನಲ್ಲಿ ಬಂದು ಜುಲ್ಮಾನೆ ಕಟ್ಟಲು ಸಿದ್ದವಾಗಿದ್ದಳು. ಅವಳೊಡನೆ ಬಂದಿದ್ದಳು ನನ್ನ 'ಜೆನ್ನಿ'.

ಹೊರಾಂಗಣದಲ್ಲಿ ನನ್ನ ಕಕ್ಷಿದಾರರ ಬಳಿ ಯಾವುದೋ ಸಾಕ್ಷಿಯ ಬಗ್ಗೆ ಮಾತನಾಡುತ್ತಿದ್ದಾಗ ಗೆಳತಿಯರಿಬ್ಬರ ಮಾತುಗಳು ಕಿವಿಗೆ ಬಿದ್ದಿತ್ತು.

"ನೀನು ಬಾರೆ ಒಳಗೆ" ಸ್ನೇಹಿತೆಯನ್ನು ಕರೆದಳು ಲೂಯಿ.

"ಸೋ ಫನ್ನಿ. ಕೋರ್ಟ್ ಒಳಗಡೆ ಬರಬೇಕು ಅಂದ್ರೆ ಇಲ್ಲಿ ಕೆಲಸ ಮಾಡೋರಾಗಿರಬೇಕು ಇಲ್ಲ ಅಪರಾಧಿ ಆಗಿರಬೇಕು, ಇಲ್ಲ ಕೇಸ್ ಹಾಕಿರೋರು ಬರಬೇಕು. ಇದರಲ್ಲಿ ಯಾವ ಕ್ಯಾಟಗರಿಗೂ ನಾನಿಲ್ಲ ಅಂದಮೇಲೆ ನಾನ್ಯಾಕೆ ಒಳಗೆ ಬರಬೇಕು".

"ಹಾಗಾದ್ರೆ ಇಷ್ಟು ದೂರ ಯಾಕ್ ಬಂದೆ? ನನ್ನನ್ನ ಅಪರಾಧಿ ಅಂತ ನೇರವಾಗಿ ಹೇಳದೆ ಈ ರೀತಿ ಸುತ್ತಿ ಬಳಸಿ ಮಾತಾಡುತ್ತಾ ಇದ್ಯಾ" ಎಂದ ಲೂಯಿ ಮಾತಿಗೆ ಜೆನ್ನಿ ನಕ್ಕಳೊ ಇಲ್ಲವೋ ನನಗಂತು ನಗು ಬಂದಿತ್ತು. ನನ್ನ ಕಕ್ಷಿದಾರರನ್ನು ಅಲ್ಲಿಂದ ಹೋಗುವಂತೆ ಹೇಳಿ ಇವರ ಕಡೆ ತಿರುಗಿದೆ.

ಅದೇ ಮೊದಲು ಜೆನ್ನಿಯನ್ನು ಕಣ್ತುಂಬಿಕೊಂಡದ್ದು. "ಅವಳು ಅದೇ ಮೊದಲಂತೆ ನನ್ನನ್ನು ನೋಡಿದ್ದು" ಈ ಮಾತನ್ನು ಅವಳು ಬದುಕಿದ್ದಾಗ ಹೇಳಿದ್ದಳು.

ಈಗ ಅವಳ ಸಾವಾಗಿ ನಾಲ್ಕು ತಿಂಗಳು ನಡೆಯುತ್ತಿದೆ. ಆದರೆ ಇನ್ನೂ ಅವಳ ಸಾವಿಗೆ ನ್ಯಾಯ ಕೊಡಿಸಲು ನನ್ನಿಂದ ಸಾಧ್ಯವಾಗುತ್ತಿಲ್ಲ.

ಜೆನ್ನಿ ಮತ್ತು ನನ್ನ ಪ್ರೇಮದ ವಿಷಯ ಮೊದಲು ಒಪ್ಪಿದ್ದೆ ಅಪ್ಪ.

"ತುಂಡುಡುಗೆ ಹಾಕ್ಕೊಂಡು ವಾರ ಒಪ್ಪತ್ತು ಇಲ್ಲದೆ ಮಾಂಸ ತಿನ್ನೋ ಕ್ರಿಶ್ಚಿಯನ್ನರ ಮನೆ ಹುಡುಗಿ ನನ್ನ ಮಗನಿಗೆ ಬೇಡವೇ ಬೇಡ" ಎಂದು ಅಮ್ಮ ಹಠ ಮಾಡಿದ್ದಳು.

ಅಂದು ಅಮ್ಮನನ್ನು ಒಪ್ಪಿಸಿ ನನ್ನ ಮತ್ತೆ ಜೆನ್ನಿಯ ಮದುವೆಯನ್ನು ಮಾಡಿಸಿದ್ದೇ ಅಪ್ಪ. ಈಗ ಆತನೇ ಅಪರಾಧಿ ಎಂದು ನಾನು ಬಯಲು ಮಾಡಲು ಹೊರಟರೆ ಸಮಾಜವೇಕೆ ಅಮ್ಮನೇ ಒಪ್ಪಲಿಲ್ಲ.

ಮಗ ತಂದೆಗೆ ಗೌರವ ತಂದುಕೊಡಬೇಕು, ಅಪ್ಪನ ಕೀರ್ತಿಯನ್ನು ಹೆಚ್ಚಿಸಬೇಕು ಆದರೆ ನೀನು ಅವರ ಮೇಲೆ ಇಂತಹ ಅಪವಾದ ಹೊರಿಸಿದ್ದು ಯಾರೂ ಕ್ಷಮಿಸಲಾರದ ತಪ್ಪು. ಇಂದಿಗೆ ನನಗೆ ಹುಟ್ಟಿದ್ದ ಒಬ್ಬ ಮಗ ಕೂಡ ಸತ್ತುಹೋದ ಎಂದು ಅಮ್ಮ ಅವತ್ತೇ ತಲೆಯ ಮೇಲೆ ನೀರು ಸುರಿದುಕೊಂಡಳು.

ಅಪ್ಪ ಅಂಥವರೇ? ಎಂದು ಅಷ್ಟೂ ವರ್ಷ ಒಂದೇ ಮನೆಯಲ್ಲಿ ಅವರ ತೊಡೆಯ ಮೇಲೆ ಆಡಿ ಬೆಳೆದ ನನಗೆ ತಿಳಿದಿರಲಿಲ್ಲ.

ಮದುವೆಯಾದ ಹೊಸದರಲ್ಲಿ ಜೆನ್ನಿಗೆ ಸೀರೆ ಉಡಲು ಬರದಿದ್ದಾಗ ಅಷ್ಟಿಷ್ಟು ಪಾಡು ಪಟ್ಟಿರಲಿಲ್ಲ. ಅಮ್ಮ ಅಂತೂ ತನ್ನ ಯಾವುದೇ ಸೀರೆಯನ್ನು ಅವಳಿಗೆ ಕೊಡಲಿಲ್ಲ. ಏಕೆಂದರೆ ಮೊದಲೇ ನಿರ್ಧರಿಸಿದಂತೆ "ಮಡಿ ಮೈಲಿಗೆ ಇಲ್ಲದ ಹೆಣ್ಣು, ಅವಳು ನನ್ನ ಸೀರೆ ಉಟ್ಟರೆ ನಾನು ಇಷ್ಟೂ ವರ್ಷ ಮಾಡಿದ ಪೂಜೆ-ಜಪತಪವೆಲ್ಲ ಸುಟ್ಟು ಬೂದಿಯಾಗಿ ತಾನು ರೌರವ ನರಕಕ್ಕೆ ಹೊಗುತ್ತೀನಿ" ಎನ್ನುವುದು ಅಮ್ಮನ ವಾದ.

"ಅವಳಿಷ್ಟದ ಬಟ್ಟೆಯನ್ನೇ ತಂದುಕೊಡು, ನಮ್ಮ ಸಂಪ್ರದಾಯದಂತೆ ಅವಳ ಉಡುಗೆ ಕಷ್ಟವಾದರೆ ಮೊದಲಿನಿಂದಲೂ ಹೇಗೆ ಬಟ್ಟೆ ಉಡುತ್ತಿದ್ದಳೊ ಹಾಗೇ ಉಟ್ಟುಕೊಂಡಿರಲಿ" ಎಂದು ಅಪ್ಪ ಮತ್ತಷ್ಟು ಸಲಹೆ ಕೊಟ್ಟು "ಕಟ್ಟುನಿಟ್ಟು ಎಲ್ಲಾ ನಿಮ್ಮಮ್ಮನ ಕಾಲಕ್ಕೆ ಮುಗಿದುಹೋಗಲಿ, ಈಗಿನ ಕಾಲದ ಮಕ್ಕಳು ನೀವು ನಿಮ್ಮ ಸ್ವಾತಂತ್ರ್ಯ ಕಿತ್ತುಕೊಳ್ಳುವುದು ತಪ್ಪು" ಎಂದು ನಗುತ್ತಲೇ ಮಾತನಾಡಿದ್ದರು.

ನಂತರದ ದಿನಗಳಲ್ಲಿ ದೊಡ್ಡ ರಾಜಕಾರಣಿಯೊಬ್ಬರ ಕೇಸ್ ಕೈಗೆತ್ತಿಕೊಂಡ ಕಾರಣ ನಾನು ಜೆನ್ನಿ ಹನಿಮೂನ್ ಗಾಗಿ ಹೋಗಲಾಗಲಿಲ್ಲ. ಮನೆಯಲ್ಲೇ ಬಿಟ್ಟು ಕೇಸಿನ ಬಗ್ಗೆ ಮಾಹಿತಿ ಕಲೆ ಹಾಕಲು ಮುಂಬೈವರೆಗು ಹೋಗಿದ್ದೆ ನಾನು ಮಾಡಿದ ದೊಡ್ಡ ತಪ್ಪು.

ಹೆಣ್ಣು ಮಕ್ಕಳನ್ನು ಬೆಳೆಸುವಾಗ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ರೀತಿ ನೀತಿಯಿಂದ ಸಾಕಿರುತ್ತಾರೆ. ಉದಾಹರಣೆಗೆ ಹಿಂದೂ ಹೆಣ್ಣುಮಕ್ಕಳು ಅಂದ್ರೆ ಚಿಕ್ಕಂದಿನಿಂದ ಎಲ್ಲಾ ತರಹದ ಬಟ್ಟೆ ಹಾಕಿದರೂ ದೊಡ್ಡವರಾದ ನಂತರ ಸೀರೆಗೆ ಅಥವಾ ಸೀರೆಯಲ್ಲಿಯೆ ಸ್ಥೀಮಿತವಾಗಿರುವಂತಿರುತ್ತದೆ. ಹಾಗೆಯೇ ಬೇರೆ ಬೇರೆ ಧರ್ಮದಲ್ಲೂ ಇರುತ್ತಾರೆ. ಜೆನ್ನಿ ವಿಚಾರಕ್ಕೆ ಬಂದರೆ ಅವಳ ಮನೆಯಲ್ಲಿ ಎಲ್ಲದಕ್ಕೂ ಸ್ವಾತಂತ್ರ್ಯ, ಆದರೆ ಅದನ್ನು ಎಂದಿಗೂ ದುರುಪಯೋಗ ಪಡಿಸಿಕೊಂಡವಳಲ್ಲ ಆದರೆ ಅವರ ವೇಷ ಭೂಷಣ ಹೇಳಬೇಕೆಂದರೆ ಚಿಕ್ಕ ಉಡುಗೆಗಳೇ ಹೆಚ್ಚು.

ಮದುವೆಯ ನಂತರ ಇಲ್ಲಿ ಅವಳ ವೇಷ ಭೂಷಣ, ಅವಳ ನಿಷ್ಕಲ್ಮಶ ಮನೋಭಾವವೇ ಅವಳಿಗೆ ಮುಳುವಾಯಿತು.

ಅಮ್ಮ ಅವಳನ್ನು ದೂರ ಇಡಲು ಮುಂದಾದಾಗ ನಾನಾದರು ಅವಳ ಜೊತೆಯಾಗಬೇಕಿತ್ತು. ಮತ್ತೊಬ್ಬರ ಬಗ್ಗೆ ನ್ಯಾಯಕ್ಕಾಗಿ ಹೊರಡುವ ನಾನು ನನ್ನ ಜೆನ್ನಿಯ ನೋವು ನಲಿವಿನಲ್ಲಿ ಭಾಗಿಯಾಗಲಿಲ್ಲ.

ನನ್ನ ಕಣ್ಣಿಗೆ ಮಾವ ಮತ್ತು ಸೊಸೆ ಸಂಬಂಧ ತಂದೆ ಮಗಳ ಭಾಂಧವ್ಯದಲ್ಲಿ ಬೆಸೆದಂತೆ ಕಂಡಿತ್ತಾದರೂ ಅದು ಯಾವ ರೀತಿಯಲ್ಲಿ ಕಾಮಕ್ಕೆ ಬಲಿಯಾಯಿತೋ ತಿಳಿಯದು.

ಮೊದಲಿನಿಂದಲೂ ಹಣ ಮಾಡಬೇಕು ಎನ್ನುವ ಹುಚ್ಚು ಹಂಬಲ ಹೊಂದಿದ್ದ ಅಪ್ಪನಿಗೆ, ಹೊರಗಿನ ಪ್ರಪಂಚವನ್ನು ಗೆದ್ದು ಬೀಗುವ ಅಲೆಗ್ಸಾಂಡರ್ ನಂತೆ ತನ್ನ ಮನೆಯ ಮನದ ಸುಖವನ್ನು ಕಂಡುಕೊಳ್ಳಲಾಗಲಿಲ್ಲ.

ಸದಾ ದೇವರ ಪೂಜೆ, ವ್ರತ, ಮನೆಯ ಆಚಾರ-ವಿಚಾರ ಎನ್ನುತ್ತಾ ಮಡಿಯಲ್ಲಿಯೇ ಇರುತ್ತಿದ್ದ ಅಮ್ಮ, ನಾನು ಹುಟ್ಟಿದ ನಂತರ ಸಂಸಾರದಲ್ಲಿಯೇ ಸನ್ಯಾಸ ಸೇವೆ ಮಾಡುತ್ತಾ ಅದರಲ್ಲೇ ಮುಳುಗಿಹೋದರು.

ಅಪ್ಪನಿಗೆ ಸ್ನೇಹಿತನಂತೆ ಜೊತೆಯಾದದ್ದೆ ಕುಡಿಯುವ ಚಟ. ಅದು ಮೊದಲಿನಿಂದ ಬಂದಿತ್ತೋ ಅಥವಾ ನನ್ನೆಲ್ಲ ಜವಾಬ್ಧಾರಿ ಇಲ್ಲಿಗೆ ಮುಗಿಯಿತು, ಮುಂದೆ ಎಲ್ಲ ನಿನ್ನದೇ ಎಂದು ಅಪ್ಪ ರಿಟೈರ್ ಮೆಂಟ್ ತೆಗೆದುಕೊಳ್ಳುವಂತೆ ತಾವಾಯಿತು ತನ್ನ ಸಣ್ಣ ಪುಟ್ಟ ಕೆಲಸವಾಯಿತು ಎಂದು ಆಗಾಗ ಅಮ್ಮನಿಗೆ ಕಾಣದಂತೆ ಕುಡಿಯುತ್ತಿದ್ದದ್ದು ನನಗೆ ಗೊತ್ತಿತ್ತು. ವಯಸ್ಸಾದ ಮೇಲಾದರೂ ಚೆನ್ನಾಗಿರಲಿ ಎನ್ನುತ್ತಾ ನಾನು ಅವರ ಕುಡಿತಕ್ಕೆ ಸೇವಕನಾಗಿ ಕೇಳಿದಾಗೆಲ್ಲ ಬಾಟಲ್ ಗಳನ್ನು ತಂದುಕೊಡುತ್ತಿದ್ದೆ.

ಎಲ್ಲರಲ್ಲೂ ಮುಗ್ಧತೆಯನ್ನೇ ಕಾಣುತ್ತಿದ್ದ ಜೆನ್ನಿ ನನ್ನ ಅಪ್ಪನ ಜೊತೆ ಒಳ್ಳೆಯ ಸಲಿಗೆಯೊಂದಿಗೆ ಇದ್ದಳು. ತಾನು ಈ ಮನೆಯಲ್ಲಿ ಒಂಟಿ ಎನ್ನುವ ಭಾವನೆ ಅವಳಿಗೆ ಅಮ್ಮನ ವಿಚಾರವಾಗಿ ಕಾಡಿದಾಗ ನನ್ನಪ್ಪನೆ ಸಮಾಧಾನ ಮಾಡುತ್ತಿದ್ದರು. ಆಗೆಲ್ಲ ಅವರನ್ನು ಪುಟ್ಟ ಮಕ್ಕಳು ತಬ್ಬಿ ಅಳುವಂತೆ ಅಳುತಿದ್ದಳು. ಸಂಜೆ ಬಂದಾಗ ಈ ವಿಷಯ ಹೇಳಿದಾಗ ನಾನು ಜೆನ್ನಿಗೆ ಸಮಾಧಾನ ಮಾಡುತ್ತಿದ್ದೆ.

ಆದರೆ ಯಾವ ವಯಸ್ಸಿನಲ್ಲಿ ಯಾವುದರಿಂದ ವಂಚಿತರಾಗಿದ್ದರೋ ಅದು ಕೆಲವೊಮ್ಮೆ ವಯಸ್ಸಾದ ಕಾಲದಲ್ಲಿ ಅಲ್ಪಾಯುಷ್ಯದಿಂದ ದೀರ್ಘಾಯುಷ್ಯದವರೆಗೆ ಏರುವಂತೆ ಅಪ್ಪನಲ್ಲೂ ಕಾಮದ ಬಯಕೆ ಏರಿತ್ತೆಂದರೆ ಅದನ್ನು ಈಗಲೂ ನಂಬಲಸಾಧ್ಯವಾಗಿದೆ.

ಜೆನ್ನಿ ಕಾಫಿ ತಂದುಕೊಡುವಾಗ ಆಗುತ್ತಿದ್ದ ಕೈಬೆರಳುಗಳ ಮಿಲನ ತಿಳಿಯದಂತೆ ಉನ್ಮತ್ತತೆ ಏರುವಂತೆ ಮಾಡಿತ್ತು ಅವರಿಗೆ. ಆದರೆ ಎದುರಿಗೆ ನಾನಿರುವಾಗ ಅವರ ಮನೋನಿಗ್ರಹ ಎಚ್ಚರಿಸುತಿತ್ತು. "ಇವಳು ನಿನ್ನ ಸೊಸೆ" ಎಂದು. ಅದರಿಂದಾಗಿಯೇ ಏನೋ ಮತ್ತೆ ಆ ರೀತಿ ಯೋಚನೆ ಮಾಡುವುದು ತಪ್ಪು ಎಂದು ಸುಮ್ಮನಾಗುತಿದ್ದರು ಎಂದು ಕಾಣುತ್ತದೆ. ಆದರೆ ಅವರ ಪರಮಾತ್ಮ ಹೊಟ್ಟೆ ಸೇರಿದಾಗ ಅವರಲ್ಲಿದ್ದ ಉಗ್ರ ವ್ಯಾಘ್ರ ಹೊರಗೆ ಬರುತ್ತಿದ್ದ. ಹಾಗೆ ಬಂದು ನನ್ನ ಜೆನ್ನಿಯ ಮಾನಹಾನಿ ಮಾಡಿದ್ದ ಎಂದು ತಿಳಿದಾಗ ನನ್ನ ಎದೆ ಒಡೆದುಹೋಗಿತ್ತು.

ಅಂದು ಮನೆಯಲ್ಲಿ ಅಮ್ಮ ಕೂಡ ಇರಲಿಲ್ಲ, ದೇವರ ದರ್ಶನ ಎಂದು ಅಕ್ಕಪಕ್ಕದವರೊಡನೆ ಟ್ರಿಪ್ ಹೋಗಿದ್ದಳು. ಇತ್ತ ಕೇಸ್ ವಿಚಾರವಾಗಿ ನಾನು ಮುಂಬೈನಲ್ಲಿದ್ದೆ.

ಅಪ್ಪನ ಹೊಟ್ಟೆಯಲ್ಲಿ ಪರಮಾತ್ಮ ರುದ್ರ ನರ್ತನ ಮಾಡುತ್ತಾ ಅವರ ತಲೆಯನ್ನು ಅನಾಚಾರದ ಕಡೆಗೆ ದೂಡಿದ್ದ.

ಅವಳೊಡನೆ ಕೇಸ್ ವಿಚಾರವಾಗಿ ನಾನು ಪಟ್ಟ ಪಾಡನ್ನು ಹೇಳುತ್ತಾ ಫೋನ್ ಕರೆಯಲ್ಲಿ ಮಾತನಾಡುತ್ತ ಇರುವಾಗ ಬಾಗಿಲು ಬಡಿದ ಶಬ್ದವಾಯಿತೆಂದು ಜೆನ್ನಿ ಎದ್ದು ಹೋಗಿ ಬಾಗಿಲು ತೆರೆದಾಗ ಮಾವ ಬಂದಿದ್ದಾರೆ ಎಂದಳು.

"ಈ ಸಮಯದಲ್ಲಿ ಅಪ್ಪ ಏಕೆ ಬಂದರು, ಅದೇನೆಂದು ಕೇಳು" ಎಂದು ಹೇಳುವಷ್ಟರಲ್ಲಿ ಕರೆ ತುಂಡಾಗಿತ್ತು.

ಎದುರಿಗಿದ್ದ ಜೆನ್ನಿಯ ಮೇಲೆ ಕತ್ತಲಲ್ಲಿ ಆಕ್ರಮಣ ಮಾಡಿದಾಗ, ಹಸಿದ ಹೆಬ್ಬುಲಿ ಹುಲ್ಲೆಯ ಮೇಲೆ ಎಗರಿದಾಗ ಪಾಪ ಎಷ್ಟೇ ಪ್ರಯತ್ನಪಟ್ಟರೂ ಅವಳಲ್ಲಿ ನನಗಾಗಿ ಕೂಡಿಟ್ಟಿದ್ದ ಅಮೂಲ್ಯ ವಸ್ತುವನ್ನು ಕಾಪಾಡಿಕೊಳ್ಳಲಾಗಲಿಲ್ಲ, ಅದು ನನ್ನಪ್ಪನ ವಶಕ್ಕೆ ಬಲವಂತವಾಗಿ ಸೇರ್ಪಡೆಯಾಗಿತ್ತು.

ಕೊನೆಯ ಬಾರಿಗೆ ಕಾಲ್ ಮಾಡಿಯಾದರೂ ನಡೆದಿದ್ದೆಲ್ಲವನ್ನೂ ನನ್ನಲ್ಲಿ ಹೇಳಿಕೊಳ್ಳಲಿಲ್ಲ ನನ್ನ ಜೆನ್ನಿ. ತಂದೆಯಂತಿದ್ದ ಮಾವ ತನ್ನನ್ನು ಹಾಳು ಮಾಡಿದ್ದನ್ನು ಗಂಡನಿಗೆ ಹೇಗೆ ತಾನೇ ಹೇಳುವುದು ಎನ್ನುವ ಕಾರಣಕ್ಕೋ ಅಥವಾ ಪವಿತ್ರವಾದ ತನುವನ್ನು ಮೈಲಿಗೆ ಮಾಡಿ ತನ್ನ ಗಂಡನಿಗೆ ಸಮರ್ಪಿಸಲಾರೆ ಎನ್ನುವ ಕಾರಣಕ್ಕೋ ನಾನು ಬರುವಷ್ಟರಲ್ಲಿ ಅವಳು ನನ್ನಿಂದ ದೂರವಾಗಿದ್ದಳು.

ಜೆನ್ನಿಯ ಬಾಡಿದ ಮುಖ, ಆ ಸಮಯದಲ್ಲಿ ಅವಳು ಎಷ್ಟು ಕಷ್ಟಪಟ್ಟಳು ಎಂದು ನೆನೆಸಿಕೊಂಡು ದುಃಖ ಉಮ್ಮಳಿಸಿ ಬಂತು. ಅವಳ ಸಾವಿನ ಸುದ್ದಿ ತಿಳಿದು ಬಂದಾಗ ಅನುಮಾನ ಬಂದದ್ದು ಅಪ್ಪನ ಮೇಲೆಯೆ. ರಾತ್ರಿ ಅಪ್ಪ ಬಂದಿದ್ದಾರೆ ಎಂದು ಹೇಳಿದ ಮೇಲೆ ಜೆನ್ನಿ ಮತ್ತೆ ಕರೆ ಮಾಡಲಿಲ್ಲ. ಮುಂದೆಂದೂ ಮಾತನಾಡಲು ಸಿಗದಷ್ಟು ದೂರಕ್ಕೆ ಹೊರಟುಹೋದಳು. ಅವಳ ಶವದ ಪಕ್ಕದಲ್ಲೇ ಕಂಬದಂತೆ ನಿಂತಿದ್ದ ಅಪ್ಪ ತಪ್ಪೇ ಮಾಡಿಲ್ಲವೆನ್ನುವಂತಿದ್ದರು.

ಕ್ಷಣ ಕೂಡ ತಡಮಾಡದೆ ಪೊಲೀಸರನ್ನು ಕರೆಸಿ ಅಪ್ಪನನ್ನು ಅರೆಸ್ಟ್ ಮಾಡಿಸಿದ್ದೆ.

ಈ ಅಚಾನಕ್ ವರ್ತನೆ ಕಂಡು ಅಮ್ಮ ಹೌಹಾರಿದ್ದಳು. ವಿಷಯವನ್ನು ಅವಳಿಗೆ ಸವಿವರವಾಗಿ ಹೇಳಿದ್ದರೂ ತನ್ನ ಗಂಡ ಅಂತಹವರಲ್ಲ ಎನ್ನುವುದೊಂದೆ ಅವರ ವಾದವಾಗಿತ್ತು.

"ತಾನೇ ತಪ್ಪು ಮಾಡಿದ್ದು ಅಂತಾಗಲೀ ಅಥವಾ ತಾನು ತಪ್ಪೇ ಮಾಡಿಲ್ಲ" ಎಂದಾಗಲಿ ಅಪ್ಪ ಏನೊಂದೂ ಹೇಳಲಿಲ್ಲ. ಸತ್ತವಳು ಹೇಗೂ ಮರಳಿ ಬಾರಳು, ಮಗನಿಗೆ ಇನ್ನೊಂದು ಮದುವೆ ಮಾಡಿದರಾಯಿತು. ಇದಕ್ಕಾಗಿ ತಾನು ಏಕೆ ಈ ತಪ್ಪನ್ನು ಒಪ್ಪಿಕೊಳ್ಳಬೇಕು? ಇಷ್ಟು ವರ್ಷ ಸಮಾಜದಲ್ಲಿ ಕಾಪಾಡಿಕೊಂಡು ಬಂದ ಟೆರರ್ ಪ್ರತಿಷ್ಠೆ ಹಾಗೂ ಮನೆಯಲ್ಲಿ ಹೆಂಡತಿಯ ಮುಂದೆ ತಲೆ ತಗ್ಗಿಸಿ ಬಾಳಲು ಸಿದ್ಧರಿರಲಿಲ್ಲ ಎಂದು ತೀರ್ಮಾನಿಸಿರಬೇಕು. ಇಷ್ಟೆಲ್ಲಾ ಆದರೂ ಅವರ ನಿಲುವು ತಟಸ್ಥವಾಗಿತ್ತು.

ಕಣ್ಣಿಗೆ ನಿದ್ದೆ ಹತ್ತಲೇ ಇಲ್ಲ. ರಾತ್ರಿ ಪೂರ್ತಿ ಅತ್ತಿಂದಿತ್ತ ಓಡಾಡುತ್ತಲೇ ಕಳೆದೆ. ಬೆಳಗ್ಗೆ 9.30ಕ್ಕೆಲ್ಲ ಕೋರ್ಟ್ ಆವರಣದೊಳಗಿದ್ದೆ.

'ಲಾಯರ್ ಎಂದರೆ ಒಳ್ಳೆಯವರನ್ನು ಕೆಟ್ಟವರನ್ನಾಗಿ, ಕೆಟ್ಟವರನ್ನು ಒಳ್ಳೆಯವರನ್ನಾಗಿ ಮಾಡುತ್ತಾರೆ. ಇದಕ್ಕೆ ನನ್ನ ಮಗ ಹೊರತೇನಲ್ಲ. ನನ್ನ ಗಂಡನನ್ನು ನಾನು ಮೊದಲಿನಿಂದಲೂ ಬಲ್ಲೆ. ಅವರು ಇಂತಹ ನೀಚ ಕೆಲಸ ಮಾಡಿದರು ಎಂದು ಬೇರೆಯವರು ಹೇಳಿದರೆ ನಂಬಲು ಅಸಾಧ್ಯ. ಅಂತಹದರಲ್ಲಿ ಸ್ವಂತ ಮಗನೇ ಈ ಮಾತು

ಹೇಳಿದಾಗ ಮೇರು ಪರ್ವತದಂತಿದ್ದ ನನ್ನ ಗಂಡ ಏನೊಂದೂ ಹೇಳದೆ ಮೌನವಾಗಿ ಹೋದರು. ಮಗನೇ ಇಂತಹ ಅಪವಾದ ಹೊರಿಸುವಾಗ ವಜ್ರದಂತ ಹೃದಯ ಚೂರು ಚೂರಾಗಿ ' ಎಂದುಕೊಂಡಳು ಅಮ್ಮ.

“ಈಗಲೇ ಹೇಳುತ್ತಿದ್ದೇನೆ, ಸತ್ತ ಹೆಂಡತಿಗೆ ಸುಳ್ಳಿನ ನ್ಯಾಯ ಕೊಡಿಸುವೆ ಎಂದು ನಿರಪರಾಧಿಯಾದ ನನ್ನ ಗಂಡನಿಗೆ ಶಿಕ್ಷೆ ನೀಡಿದರೆ ಆ ಕೋರ್ಟ್ ಆವರಣದಲ್ಲೇ ವಿಷ ಕುಡಿದು ಸಾಯುತ್ತೇನೆ” ಎಂದಿದ್ದಳು.

"ಒಬ್ಬ ನಿರಪರಾಧಿಯ ಸಾವಿಗೆ ನ್ಯಾಯ ಕೊಡಿಸಲು ಹೋದರೆ ಮತ್ತೊಬ್ಬ ನಿರಪರಾಧಿಯ ಸಾವಾಗುತ್ತದೆ". ಸತ್ಯ ತಿಳಿದ ನಾನು ಸುಮ್ಮನಾದರೆ ಸತ್ತ ಹೆಂಡತಿಗೆ ಅನ್ಯಾಯವಾಗುತ್ತದೆ. ಅಕಸ್ಮಾತ್ ಅವಳಿಗೆ ನ್ಯಾಯ ಕೊಡಿಸಲು ಅಸಮರ್ಥನೆಂದು ಭಾವಿಸಿ ಅವಳ ನೆನಪಲ್ಲಿ ನಾನು ಸತ್ತರೆ ಅವಳಿಗಾದ ಅನ್ಯಾಯಕ್ಕೆ ನ್ಯಾಯ ಸಿಗಲಾರದು.

ತಪ್ಪನ್ನು ಒಪ್ಪಿಕೊಳ್ಳದೆ ಆದದ್ದು ಆಗಲಿ ಎನ್ನುವ ಮನಸ್ಥಿತಿಯಲ್ಲಿ ಅಪ್ಪ ಕಟಕಟೆ ಏರಲು ಸಿದ್ಧವಾಗಿದ್ದಾರೆ.

ಸೊಸೆಯನ್ನು ಸರಿಯಾಗಿ ಕಾಣದೆ ಮಡಿ-ಮತವೆನ್ನುತ್ತ ದೂರವಿಟ್ಟ ಅಮ್ಮನೂ ಈ ತಪ್ಪಿಗೆ ಭಾಗಿಯಾದಂತೆ.

ಪ್ರೀತಿಸಿ ಮದುವೆಯಾಗಿ ಅವಳನ್ನು ಕೆಲಸದ ಕಾರಣಕ್ಕೆ ದೂರವಿಟ್ಟು, ಮದುವೆಯಾದ ಮೇಲೆ ಮನೆಯಲ್ಲಿ ಅವಳು ಹೇಗೆ ನಡೆದುಕೊಳ್ಳಬೇಕೆಂದು ಹೇಳದ ನಾನು ಕೂಡ ಪಾಪಿ.

ಎಂದೋ ಮಣ್ಣಲ್ಲಿ ಮಣ್ಣಾದ ಕಾಮಕ್ಕೆ ಕುಡಿತದ ಅಮಲಲ್ಲಿ ಪುಷ್ಠಿ ನೀಡಿ ಅವಳ ಅಂದಕ್ಕೆ ಹುಚ್ಚನಾಗಿ ಅವಳನ್ನು ಹಾಳು ಮಾಡಿದ ಘೋರ ಪಾಪಿ ನನ್ನಪ್ಪ.

ತೀರ್ಪು ನ್ಯಾಯ ಸಮ್ಮತವಾಗಿ ಬಂದು ಅಪ್ಪನಿಗೆ ಶಿಕ್ಷೆಯಾದರೆ ಅಮ್ಮ ಸಾಯುವುದು ಒಂದು ತೆರನಾದರೆ, ಇದೇ ಹೊರಗಿನ ಜಗತ್ತಿಗೆ ಉದಾಹರಣೆಯಾಗಿ ದುರ್ಬಳಕೆಯಾಗುವ ಸಾಧ್ಯತೆಯೂ ಇದೆ. ನೋಡುವ ನೋಟಕ್ಕೂ ಕಾಮದ ಬಣ್ಣ ತುಂಬಿ ಮಾವನನ್ನು ಹೊರಗಟ್ಟುವ ಸೊಸೆಯಂದಿರೇನೂ ಕಮ್ಮಿ ಇಲ್ಲ.

ಆಕಸ್ಮಾತ್ ಅಪ್ಪನ ಕುತಂತ್ರ ಫಲಿಸಿ ನ್ಯಾಯ ತಲೆಕೆಳಗಾದರೆ "ಲಾಯರ್ ತನ್ನ ಹೆಂಡತಿಗೆ ನ್ಯಾಯ ಕೊಡಿಸಲು ಅಸಾಧ್ಯವಾದ ಈ ಕಾಲದಲ್ಲಿ ತಮಗೆಲ್ಲಿ ನ್ಯಾಯ ಸಿಗುತ್ತದೆ" ಎನ್ನುವ ಹಿಂಜರಿಕೆಯಿಂದ ನಿತ್ಯ ಅತ್ಯಾಚಾರಕ್ಕೆ ಗುರಿಯಾಗುವ ಹೆಣ್ಣುಮಕ್ಕಳೆಷ್ಟೋ ಇದ್ದಾರೆ.

ಒಂದು ಕುಟುಂಬದ ಅನ್ಯಾಯದ ಕಥೆ ಸಮಾಜಕ್ಕೆ ಯಾವ ತರದಲ್ಲಿ ಪೂರಕ-ಮಾರಕವಾಗುತ್ತದೆ ಎನ್ನುವುದು ಕೂಡ ಈ ಕೇಸಿನ ತೀರ್ಮಾನದ ಮೇಲೆ ನಿಂತಿದೆ.

ಸಮಯ ಸರಿಯಾಗಿ 10:30 ಆಯ್ತು. ಎಲ್ಲರೂ ಕೋರ್ಟ್ ಒಳಗಡೆ ಬಂದಿದ್ದೇವೆ.

ಅಪ್ಪ ಕಟಕಟೆಯಲ್ಲಿ ನಿಂತಿದ್ದರೆ ಅಮ್ಮ ತಾನು ಕುಳಿತಿದ್ದ ಜಾಗದಲ್ಲಿ ದೇವರ ಮೇಲೆ ಭಾರ ಹಾಕಿ ನನ್ನತ್ತ ತಿರುಗಿ ಕೂಡ ನೋಡದೆ ಕುಳಿತಿದ್ದಾಳೆ. ಅವಳ ಕೈನಲ್ಲಿ ಪೂಜೆಯ ಬುಟ್ಟಿ ಕೂಡ ಇತ್ತು, ಬಹುಶಃ ಆಗತಾನೆ ದೇವಸ್ಥಾನದಲ್ಲಿ ಗಂಡನ ಹೆಸರಲ್ಲಿ ಪೂಜೆ ಮಾಡಿಸಿ ಬಂದಿರಬೇಕು.

ವಿಚಾರಣೆ, ವಾದ - ಪ್ರತಿವಾದಗಳು ಮಾತ್ರ ಬಾಕಿ ಉಳಿದಿದೆ ಎಂದುಕೊಳ್ಳುವಷ್ಟರಲ್ಲಿ ಅಪ್ಪ ಕಟಕಟೆಯ ಮೇಲಿಂದ ಉರುಳಿ ಬಿದ್ದರು.

ಆಸ್ಪತ್ರೆಗೆ ರವಾನಿಸುವಾಗಲೇ ಅವರ ಪ್ರಾಣ ಹೋಗಿತ್ತು. ಸಿವಿಯರ್ ಹಾರ್ಟ್ ಅಟ್ಯಾಕ್ ಎಂದು ಡಾಕ್ಟರ್ ರಿಪೋರ್ಟ್ ಕೊಟ್ಟರು. ಮನುಷ್ಯರ ಮುಂದೆ ವಿಚಾರಣೆ ನಡೆಯುವ ಮೊದಲೇ ದೇವರೇ ಅಪರಾಧಿಗೆ ಮರಣ ದಂಡನೆ ನೀಡಿದ್ದ.

ಇಷ್ಟೆಲ್ಲಾ ಆದರೂ ಅಮ್ಮನ ದೃಷ್ಟಿಯಲ್ಲಿ ನಾನು ವೈರಿಯೇ ಆಗಿದ್ದೆ ಏಕೆಂದರೆ ನಿರಪರಾಧಿಯಾದ ಗಂಡ ತನ್ನ ಮಗನ ಕಾರಣಕ್ಕೆ ಕೋರ್ಟ್ ನ ಕಟಕಟೆ ಏರಿದ್ದು ಸಾಲದ್ದಕ್ಕೆ ಅವಮಾನ ತಾಳಲಾರದೆ ಹೃದಯ ನೊಂದು ಸತ್ತರು ಎನ್ನುವ ಕಾರಣಕ್ಕೆ.

ಇದು ಕೂಡ ಸಮಾಜದಲ್ಲಿ ಯಾವ ತಂದೆಯೂ ಮಗನನ್ನು ನಂಬದ ಸ್ಥಿತಿಗೆ ಕೊಂಡುಹೋಗದ ಕೆಟ್ಟ ಉದಾಹರಣೆಯಾಗಿ ಉಳಿಯದಿದ್ದರೆ ಸಾಕು.